**B**

SL. No. : P

ಒಟ್ಟು ಪ್ರಶ್ನೆಗಳ ಸಂಖ್ಯೆ : 45 ]

Total No. of Questions : 45 ]

**CCE RR**

**UN-REVISED**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8

[ Total No. of Printed Pages : 8

**ಸಂಕೇತ ಸಂಖ್ಯೆ : 33-K** **Code No. : 33-K**

# ವಿಷಯ : ದ್ವಿತೀಯ ಭಾಷೆ — ಕನ್ನಡ

# Subject : Second Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

ದಿನಾಂಕ : 26. 06. 2018 ] [ Date : 26. 06. 2018

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-00 ರವರೆಗೆ ] [ Time : 9-30 A.M. to 12-00 Noon

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಳಿಗೆ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 45 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.



ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**

ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

## ವಿಭಾಗ – 'ಎ'

### ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೋಷಕ ಅಧ್ಯಯನ)

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ :** 8 × 1 = 8

1. ರಾಹುಲರ ಹೆಸರಿಗೆ ದ್ರಾವಿಡ್ ಎಂಬುದು ಸೇರಿದ್ದು ಹೇಗೆ ?
2. ಜಿಂಕೆಯು ಬೇಡನ ಬಾಣದ ಹೊಡೆತದಿಂದ ಹೇಗೆ ತಪ್ಪಿಸಿಕೊಂಡಿತು ?
3. ಪುಟ್ಟರಾಜ ಗವಾಯಿಯವರು ಎಲ್ಲಿ ಜನಿಸಿದರು ?
4. ಸಂಜೆ ಮನೆಗೆ ಮರಳುವ ಗೋಪಾಲನ ಭಯಕ್ಕೆ ಕಾರಣವೇನು ?
5. ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು ?
6. ಕೌರವನ ಸೇನೆಯು ಉತ್ತರನಿಗೆ ಹೇಗೆ ಕಾಣಿಸಿತು ?
7. ಬಣ್ಣ ಬಣ್ಣದ ಹೂಗಳು ಹೇಗೆ ಕಾಣಿಸುತ್ತಿತ್ತು ?
8. ಉತ್ತರನು ನಿಟ್ಟೋಟದಲ್ಲಿ ಏಕೆ ಓಡಿದನು ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 11 × 2 = 22

9. ಗಿಳಿಯು ಇಂದ್ರನಿಗೆ ಯಾವ ವರ ಕೊಡಬೇಕೆಂದು ಕೇಳಿತು ?
10. ಕರ್ನಾಟಕದ ಕ್ರಿಕೆಟ್ ಆಟಗಾರರ ಹಿರಿಮೆ ಎಂತಹುದು ?
11. ಪಶ್ಚಿಮ ಘಟ್ಟಗಳ ಉತ್ಪನ್ನಗಳು ನಮ್ಮ ದಿನನಿತ್ಯದ ಬದುಕಿಗೆ ಹೇಗೆ ಸಹಕಾರಿಯಾಗಿವೆ ?
12. ಗೋಪಾಲನ ತಾಯಿಯು ತನ್ನ ಮಗ ಬೇಗನೆ ಏಳಬೇಕೆಂದು ಏಕೆ ಬಯಸಿದಳು ?
13. ಒಡಲು ಒಡೆಯುವಂತೆ ಅರ್ಜುನನು ಮನದಲ್ಲಿ ನಗಲು ಕಾರಣವೇನು ?
14. ಯಾವಾಗ ಜೋಯಿಸರ ಮಾತು ವೇದವಾಕ್ಯವಾಗುತ್ತಿತ್ತು ?
15. ಅಪ್ಪಯ್ಯನಿಗೆ ಮಕ್ಕಳು ಹೇಗೆ ಹೆಸರು ತರುತ್ತಾರೆ ?
16. ಕವಿ ಸಿ.ಪಿ.ಕೆ.ಯವರು ಪ್ರತಿಯೊಬ್ಬನೂ ತನ್ನದಾದ ಕರ್ತವ್ಯವನ್ನು ಹೇಗೆ ಮಾಡಬೇಕೆನ್ನುತ್ತಾರೆ ?
17. ಸಾವಿತ್ರಿ ತೀರಾ ಮುಗ್ಧೆ ಹೇಗೆ ?
18. ಪ್ರಕೃತಿಯು ಮಾನವನಿಗೆ ತನ್ನ ಪ್ರತಿಭಟನೆಯನ್ನು ಹೇಗೆ ತೋರಿದೆ ?
19. ಬಸವಣ್ಣನವರು ಕುರುಡು ಸಂಪ್ರದಾಯವನ್ನು ಹೇಗೆ ಲೇವಡಿ ಮಾಡಿದ್ದಾರೆ ?

20. **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** 1 × 3 = 3

ಕೊರಡ ಕೊನರಿಸಿ ....................................................

..........................................................................

..........................................................................

............................................... ಕಲರವಕೆ ಮತ್ತೇರಿದೆ.

*ಅಥವಾ*

ಯುಗದ ಹಿಂದಿನ ಕೊಳೆಯ .........................................

..........................................................................

..........................................................................

............................................................ ಸವಿಚೈತ್ರವು.

**ಈ ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** 2 × 3 = 6

21. ಬಿ.ಪಿ. ರಾಧಾಕೃಷ್ಣ

22. ಸು.ರಂ. ಎಕ್ಕುಂಡಿ

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ :** 2 × 3 = 6

23. "ಪುಟ್ಟರಾಜ, ಇನ್ನೊಮ್ಮೆ ಕನ್ನಡನಾಡಲ್ಲಿ ಹುಟ್ಟಿ ಬಾ"

24. "ಇದ್ದೀ, ನೀನು ಇದ್ದೀ, ನೀನು ಇರಬೇಕು"

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 2 × 4 = 8

25. ಅಜ್ಜನು ಸಾಹೇಬರ ಮನೆಗೆ ಹೋಗಬೇಕಾಗಿ ಬಂದ ಘಟನೆಯನ್ನು ವಿವರಿಸಿ.

*ಅಥವಾ*

ಪ್ರಾಮಾಣಿಕ ಶಿಕ್ಷಕನಿಗೆ ದೊರೆತ ಗೌರವವು ನೊಬೆಲಿಗೆ ಸಮಾನ ಎನಿಸಿದ್ದು ಹೇಗೆ ? ವಿವರಿಸಿ.

26. 'ಗುರಿ' ಪದ್ಯದ ಸಾರಾಂಶವನ್ನು ಕವಿಯ ಆಶಯದೊಂದಿಗೆ ಬರೆಯಿರಿ.

*ಅಥವಾ*

ಎಂ. ಗೋಪಾಲಕೃಷ್ಣ ಅಡಿಗ ಅವರು ನಮ್ಮ ಜೀವನಶೈಲಿಯ ಕುರಿತು ನೀಡಿದ ಸಂದೇಶವನ್ನು ವಿವರಿಸಿ ಬರೆಯಿರಿ.

## ವಿಭಾಗ – 'ಬಿ'

### (ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** 12 × 1 = 12

27. 'ಚಪ್ಪಾಳೆತಟ್ಟು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

(ಎ) ತತ್ಪುರುಷ ಸಮಾಸ (ಬಿ) ಕರ್ಮಧಾರಯ ಸಮಾಸ

(ಸಿ) ಕ್ರಿಯಾ ಸಮಾಸ (ಡಿ) ದ್ವಿಗು ಸಮಾಸ

28. 'ದೃಷ್ಟಿ' — ಈ ಪದದ ತದ್ಭವ ರೂಪ

(ಎ) ಕಣ್ಣು (ಬಿ) ದಿಟ್ಟಿ

(ಸಿ) ದಟ್ಟಿ (ಡಿ) ದೃಶ್ಯ

29. ಸಪ್ತಮೀ ವಿಭಕ್ತಿ ಪ್ರತ್ಯಯ ಉಳ್ಳ ಪದ

(ಎ) ಬಂಗಲೆಯ (ಬಿ) ಗಾಬರಿಯಿಂದ

(ಸಿ) ಮನೆಯು (ಡಿ) ಕೋಣೆಯಲ್ಲಿ

30. 'ಸಿಡುಕು–ಮಿಡುಕು' ಎಂಬುದು

(ಎ) ಜೋಡಿಪದ (ಬಿ) ದ್ವಿರುಕ್ತಿ

(ಸಿ) ಅನುಕರಣಾವ್ಯಯ (ಡಿ) ನುಡಿಗಟ್ಟು

31. 'ಜ್ಞಾನ' — ಈ ಪದದ ವಿರುದ್ಧಾರ್ಥಕ ಪದ

(ಎ) ವಿಜ್ಞಾನ (ಬಿ) ಅಜ್ಞಾನ

(ಸಿ) ಸುಜ್ಞಾನ (ಡಿ) ಮನೋಜ್ಞಾನ

32. 'ಅತ್ತಾರೆ' — ಈ ಪದದ ಗ್ರಾಂಥಿಕ ರೂಪ

(ಎ) ಅಳುತ್ತದೆ (ಬಿ) ಅಳತಾವ

(ಸಿ) ಅತ್ತರೆ (ಡಿ) ಅಳುತ್ತಾರೆ

33. 'ಸತಿ' — ಈ ಪದದ ಅರ್ಥ

(ಎ) ಹೆಣ್ಣು (ಬಿ) ಗಂಡು

(ಸಿ) ಗಂಡ (ಡಿ) ಹೆಂಡತಿ

34. 'ದೀಪದೆದುರಿಗೆ ತಿಮಿರ ಸರಿಯುವಂತೆ' — ಈ ವಾಕ್ಯದಲ್ಲಿ ಬಳಕೆಯಾದ ಅಲಂಕಾರ

(ಎ) ಉಪಮಾಲಂಕಾರ (ಬಿ) ರೂಪಕಾಲಂಕಾರ

(ಸಿ) ಶಬ್ದಾಲಂಕಾರ (ಡಿ) ದೃಷ್ಟಾಂತಾಲಂಕಾರ

35. ಅವನು, ಅವರು ಎಂಬ ಪದಗಳು ಇದಕ್ಕೆ ಉದಾಹರಣೆ

(ಎ) ಅಂಕಿತನಾಮ (ಬಿ) ಸರ್ವನಾಮ

(ಸಿ) ಕ್ರಿಯಾಪದ (ಡಿ) ಭಾವನಾಮ

36. 'ಜಿಂಕೆ' ಪದವು — ಈ ಗುಂಪಿಗೆ ಸೇರುತ್ತದೆ

(ಎ) ರೂಢನಾಮ (ಬಿ) ಅನ್ವರ್ಥಕನಾಮ

(ಸಿ) ಅಂಕಿತನಾಮ (ಡಿ) ಸರ್ವನಾಮ

37. ದ್ವಿರುಕ್ತಿ ಪದಕ್ಕೆ ಉದಾಹರಣೆ

(ಎ) ಢಣಢಣ (ಬಿ) ಗಿಡಗಂಟೆ

(ಸಿ) ಮತ್ತೆಮತ್ತೆ (ಡಿ) ಸುಖದುಃಖ

38. ಆರು ಸಾಲಿನ ಪದ್ಯಕ್ಕೆ ಹೀಗೆನ್ನುವರು

(ಎ) ತ್ರಿಪದಿ (ಬಿ) ದ್ವಿಪದಿ

(ಸಿ) ಚೌಪದಿ (ಡಿ) ಷಟ್ಪದಿ

## ವಿಭಾಗ – 'ಸಿ'

## (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

**ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** $4 \times 1 = 4$

ಕನ್ನಡ ರಂಗಭೂಮಿಗೆ ದಕ್ಷಿಣ ಕನ್ನಡ ಜಿಲ್ಲೆ ಕೊಟ್ಟಿರುವ ಕೊಡುಗೆಗಳಲ್ಲಿ ಬಿ.ವಿ. ಕಾರಂತರು ಪ್ರಮುಖರು. ಇವರು ಬಂಟ್ವಾಳ ತಾಲ್ಲೂಕಿನ ಬಾಬುಕೋಡಿ ಗ್ರಾಮದ ನಾರಾಣಪ್ಪಯ್ಯ ಹಾಗೂ ಲಕ್ಷ್ಮಮ್ಮ ದಂಪತಿಗಳ ಹಿರಿಯ ಮಗನಾಗಿ ೧೯೨೯ ರಲ್ಲಿ ಜನಿಸಿದರು. ಸಂಗೀತ, ನಾಟಕ, ಓದು – ಈ ಮೂರು ಕಾರಂತರ ಬಾಲ್ಯದ ಆಸಕ್ತಿಯ ವಿಷಯಗಳು. ಬಡತನದಿಂದಾಗಿ ಬಾಲ್ಯದಲ್ಲಿಯೇ ಗುಬ್ಬಿ ಕಂಪನಿಯನ್ನು ಸೇರಿದರು. ಅಲ್ಲಿ ನಟನೆಯ ಜೊತೆಗೆ ಹಾರ್ಮೋನಿಯಂ ನುಡಿಸುವುದನ್ನು ಕಲಿತರು.

ಕಾರಂತರು ೧೦೪ ನಾಟಕಗಳನ್ನು ನಿರ್ದೇಶಿಸಿದ್ದಾರೆ. ವಂಶವೃಕ್ಷ, ತಬ್ಬಲಿಯು ನೀನಾದೆ ಮಗನೆ, ಚೋಮನ ದುಡಿ ಮುಂತಾದ ರಾಷ್ಟ್ರ ಪ್ರಶಸ್ತಿ ವಿಜೇತ ಎಂಟು ಚಿತ್ರಗಳಿಗೆ ನಿರ್ದೇಶನ ನೀಡಿದ್ದಾರೆ. ಇತರ ನಿರ್ದೇಶಕರ ೨೫ ಚಿತ್ರಗಳಿಗೆ ಹಿನ್ನೆಲೆ ಸಂಗೀತ ನೀಡಿದ್ದಾರೆ. ರಾಷ್ಟ್ರಾದ್ಯಂತ ಹದಿನೈದು ನಾಟಕ ಕಮ್ಮಟಗಳ ನಿರ್ದೇಶಕರಾಗಿದ್ದ ಕಾರಂತರಿಗೆ ಪದ್ಮಶ್ರೀ ಮೊದಲಾದ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿಗಳು ಲಭಿಸಿವೆ.

*ಪ್ರಶ್ನೆಗಳು :*

39. ಕಾರಂತರು ಎಲ್ಲಿ ಜನಿಸಿದರು ?

40. ಕಾರಂತರ ಆಸಕ್ತಿ ವಿಷಯಗಳಾವುವು ?

41. ಕಾರಂತರು ಎಷ್ಟು ನಾಟಕಗಳನ್ನು ನಿರ್ದೇಶಿಸಿದ್ದಾರೆ ?

42. ಕಾರಂತರಿಗೆ ಸಿಕ್ಕ ಪ್ರಶಸ್ತಿಗಳು ಯಾವುವು ?

43. **ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ :** $1 \times 3 = 3$

* ಕೈಕೆಸರಾದರೆ ಬಾಯಿ ಮೊಸರು
* ಹಾಸಿಗೆ ಇದ್ದಷ್ಟು ಕಾಲು ಚಾಚು
* ಬೆಳೆಯುವ ಸಿರಿ ಮೊಳಕೆಯಲ್ಲಿ

44. ನಿಮ್ಮನ್ನು ಕೊಪ್ಪಳ ಜಿಲ್ಲೆಯ ಪ್ರಗತಿನಗರದ 'ಚಂದ್ರಶೇಖರ' ಎಂದು ಭಾವಿಸಿಕೊಂಡು, ಬೀದಿದೀಪ ಸರಿಪಡಿಸುವಂತೆ ವಿನಂತಿಸಿ ನಿಮ್ಮ ಊರಿನ 'ಗ್ರಾಮ ಪಂಚಾಯತಿ ಅಧ್ಯಕ್ಷರಿ'ಗೊಂದು ಪತ್ರ ಬರೆಯಿರಿ. $1 \times 4 = 4$

***ಅಥವಾ***

ನಿಮ್ಮನ್ನು ವಿಜಯಪುರದ ಗವಿಶ್ರೀ ನಗರದ 'ಕುಸುಮಾ' ಎಂದು ಭಾವಿಸಿಕೊಂಡು, ನಿಮ್ಮ ವಿದ್ಯಾಭ್ಯಾಸದ ಪ್ರಗತಿ ಕುರಿತು, ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ 'ಸಿದ್ಧೇಶ್ವರ' ಎಂಬ ಹೆಸರಿನ ತಂದೆಯವರಿಗೊಂದು ಪತ್ರ ಬರೆಯಿರಿ.

45. **ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ :** $1 \times 4 = 4$

* ದೂರದರ್ಶನದ ಮಹತ್ವ
* ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ
* ಭ್ರಷ್ಟಾಚಾರ